ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-7 Issue-4, January - February 2026, Pp. 53-57
©*IIMRD*, Mysuru
IIMRD JOURNALS
www.iimrd.com

# ನಾಲ್ವಡಿ ಕೃಷ್ಣರಾಜ ಒಡೆಯರ ಕನಸಿನ ಕೂಸು – ಕನ್ನಂಬಾಡಿ ಕಟ್ಟೆ (ಕೃಷ್ಣರಾಜ ಸಾಗರ)

**ಸವಿತಾ ಕೆ.ಎಸ್**

ಸಹ ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು, ಇತಿಹಾಸ ವಿಭಾಗ, ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು, ಮೈಸೂರು.

**ಸಾರಾಂಶ: (Abstract)**

*ಭಾರತದ ಐತಿಹ್ಯ ಸರಣಿಯಲ್ಲಿ, ದಕ್ಷಿಣ ಭಾರತವನ್ನಾಳಿದ ಮೈಸೂರು ಒಡೆಯರ ರಾಜಮನೆತನವು ವೈಶಿಷ್ಟ್ಯಪೂರ್ಣ ಮನೆತನವಾಗಿ ಅಗ್ರಗಣ್ಯಸ್ಥಾನ ಗಳಿಸಿದೆ. 1339ರಲ್ಲಿ ಯದುರಾಯನಿಂದ ಆರಂಭವಾಗಿ 1947ರ ವರೆಗೆ ಸುಮಾರು 25 ರಾಜಮಹಾರಾಜರಿಂದ ಆಳಲ್ಪಟ್ಟ ಮೈಸೂರು ಸಂಸ್ಥಾನವು ಕೃಷಿ, ಕೈಗಾರಿಕೆ, ಶಿಕ್ಷಣ, ಬ್ಯಾಂಕಿಂಗ್, ವಾಣಿಜ್ಯ, ಸಾರಿಗೆ, ನಗರಾಭಿವೃದ್ಧಿ ಮೊದಲಾದ ಕ್ಷೇತ್ರಗಳಲ್ಲಿ ಸರ್ವಾಂಗೀಣ ಪ್ರಗತಿ ಸಾಧಿಸಿ ಭಾರತದ ಇತಿಹಾಸದಲ್ಲಿ ತನ್ನದೇ ಆದ ಛಾಪು ಮೂಡಿಸಿದೆ. ವಿಜಯನಗರ ಸಾಮ್ರಾಜ್ಯದ ಪತನಾಂತರ ಏಳಿಗೆಗೆ ಬಂದ ರಾಜಮನೆತನಗಳಲ್ಲಿ ಮೈಸೂರು ಒಡೆಯರು ಪ್ರಮುಖರಾಗಿದ್ದು ಕರ್ನಾಟಕ ಇತಿಹಾಸ ಮತ್ತು ಸಂಸ್ಕೃತಿಯನ್ನು ಶ್ರೀಮಂತಗೊಳಿಸಿದ್ದಾರೆ. ಹಿರಿಮೆಯಲ್ಲಿ ವಿಜಯನಗರ ಸಾಮ್ರಾಜ್ಯದಷ್ಟು ಔನ್ನತ್ಯಕ್ಕೇರಿದ್ದರೂ, ಅದೇ ಧ್ಯೇಯ ಧೋರಣೆಗಳನ್ನು ಮೈಸೂರು ಸಂಸ್ಥಾನ ಹೊತ್ತುನಿಂತುದು ಇಲ್ಲಿ ಗಮನಾರ್ಹವಾಗಿದೆ.*

**ಮುಖ್ಯಪದಗಳು (Keywords):** *ಕರ್ನಾಟಕ ಇತಿಹಾಸ, ಮೈಸೂರು ಸಂಸ್ಥಾನ, ಮೈಸೂರು ಒಡೆಯರು, ನಾಲ್ವಡಿ ಕೃಷ್ಣರಾಜ ಒಡೆಯರ್, ಕನ್ನಂಬಾಡಿ ಕಟ್ಟೆ*

## ಪೀಠಿಕೆ

ಜನೋಪಯೋಗಿ ಧರ್ಮಕಾರ್ಯಗಳಿಂದ ರಾಜರ್ಷಿ ಎಂದು ಹೆಸರಾದ ನಾಲ್ವಡಿ ಕೃಷ್ಣರಾಜ ಒಡೆಯರ್‌ರವರು 1884 ಜೂನ್ 04 ರಂದು ಶ್ರೀ ಹತ್ತನೇ ಚಾಮರಾಜ ಒಡೆಯರ್ ಮತ್ತು ಶ್ರೀಮತಿ ಕೆಂಪನಂಜಮ್ಮಣ್ಣಿಯವರ ಪುತ್ರರಾಗಿ ಜನಿಸಿದರು. ಇವರು 1892ರಲ್ಲಿ ರಾಯಲ್ ಸ್ಕೂಲ್‌ನಲ್ಲಿ ಶಿಕ್ಷಣವನ್ನು ಪಡೆದರು. ಇವರು ಶಿಕ್ಷಣದ ಜೊತೆಗೆ ಕುದುರೆ ಸವಾರಿ, ಅಂಗಸಾಧನೆ, ಚಿತ್ರಕಲೆ ಮತ್ತು ಸಂಗೀತದಲ್ಲೂ ಪ್ರವೀಣರಾಗಿದ್ದು ಇಂಗ್ಲಿಷ್, ಉರ್ದು, ಪಾರ್ಸಿ, ಕನ್ನಡ ಮತ್ತು ಸಂಸ್ಕೃತ ಭಾಷೆಗಳಲ್ಲಿ ಪಾಂಡಿತ್ಯ ಗಳಿಸಿದ್ದು, ವೈಜ್ಞಾನಿಕ ದೃಷ್ಟಿಕೋನವನ್ನು ಮೈಗೂಡಿಸಿಕೊಂಡಿದ್ದರು.

ಆಧುನಿಕ ಮೈಸೂರು ಸಂಸ್ಥಾನದ ಶಿಲ್ಪಿ, ಮೈಸೂರು ಸಂಸ್ಥಾನದ ಕ್ರಾಂತಿ ಪುರುಷರೆಂಬ ಹೆಗ್ಗಳಿಕೆಗೆ ಕಾರಣರಾದ ನಾಲ್ವಡಿಯವರು 10ನೇ ಚಾಮರಾಜ ಒಡೆಯರ್ ನಂತರ 1902ರಲ್ಲಿ ಮೈಸೂರು ಸಂಸ್ಥಾನದ ಸಿಂಹಾಸನವನ್ನೇರಿ 1940ರವರೆಗೆ ಸುಮಾರು 38 ವರ್ಷಗಳ ಕಾಲ ಸುದೀರ್ಘ ಆಳ್ವಿಕೆ ನಡೆಸಿ ಮೈಸೂರು

*Please cite this article as:* ಸವಿತಾ ಕೆ.ಎಸ್. (2026). ನಾಲ್ವಡಿ ಕೃಷ್ಣರಾಜ ಒಡೆಯರ ಕನಸಿನ ಕೂಸು – ಕನ್ನಂಬಾಡಿ ಕಟ್ಟೆ (ಕೃಷ್ಣರಾಜ ಸಾಗರ). ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 7(4). ಪು.ಸಂ.* 53–57

ಸಂಸ್ಥಾನದ ಸರ್ವಾಂಗೀಣ ಪ್ರಗತಿಗೆ ಕಾರಣರಾದರು. ಇವರ ಬಹುಮುಖ ಕ್ಷೇತ್ರಗಳ ಪ್ರಗತಿಯಲ್ಲಿ ನೀರಾವರಿ ಯೋಜನೆಗಳನ್ನು ಅನುಷ್ಠಾನಗೊಳಿಸಿದ್ದು ಪ್ರಮುಖವಾಗಿದ್ದು, ಇದರಿಂದ ಬರಡುನಾಡು ಹಚ್ಚಹಸಿರಿನ ನಾಡಾಗಿ ಕಂಗೊಳಿಸಲು ನಾಂದಿಯಾಯಿತು. ನಾಲ್ವಡಿಯವರ ಆಳ್ವಿಕೆಯಲ್ಲಿ 7 ಮಂದಿ ಮೇಧಾವಿಗಳು ದಿವಾನರಾಗಿ ಸೇವೆ ಸಲ್ಲಿಸಿದ್ದಾರೆ. ಅವರುಗಳೆಂದರೆ, ಸಿ.ಎಸ್. ಕೃಷ್ಣಮೂರ್ತಿ (1902–06), ವಿ.ಪಿ.ಮಾಧವರಾವ್ (1906–09), ಓ. ಆನಂದರಾವ್ (1909–12), ಸರ್. ಎಂ.ವಿಶ್ವೇಶ್ವರಯ್ಯ (1912–18), ಸರ್ ಕಾಂತರಾಜ ಅರಸ್ (1918–22), ಅಲ್ಬಿಯನ್ ಬ್ಯಾನರ್ಜಿ (1922–26) ಮತ್ತು ಸರ್ ಮಿರ್ಜಾ ಇಸ್ಮಾಯಿಲ್ (1926–41)

**ಕೃಷ್ಣರಾಜ ಸಾಗರ**

ಕನ್ನಂಬಾಡಿ ಎನ್ನುವುದು ಕಾವೇರಿ ನದಿ ತೀರದ ಒಂದು ಗ್ರಾಮ. ಇಲ್ಲಿ ಕಣ್ವ ಮಹರ್ಷಿಗಳು ತಪಸ್ಸು ಮಾಡಿದ್ದರು ಎಂಬ ಐತಿಹ್ಯವಿದೆ. ಕಣ್ವರಿಂದಾಗಿಯೇ ಈ ಗ್ರಾಮಕ್ಕೆ ಕಣ್ವಪುರಿ, ಕಣ್ಣಂಬಾಡಿ, ಮನ್ನಂಬಾಡಿ ಎಂಬ ಹೆಸರು ಬಂತು ಎನ್ನಲಾಗಿದೆ. ಈ ಕನ್ನಂಬಾಡಿಯನ್ನು ದೊಡ್ಡಯ್ಯ ಪ್ರಭು ಎಂಬ ಪಾಳೇಗಾರ ಆಳುತ್ತಿದ್ದನು. ಕ್ರಿ.ಶ.1600ರಲ್ಲಿ ಮೈಸೂರು ದೊರೆ ರಾಜ ಒಡೆಯರ್ ಇದನ್ನು ಗೆದ್ದುಕೊಂಡರು. ಭಾರತದಲ್ಲಿಯೇ ಮೊಟ್ಟ ಮೊದಲ ಬಾರಿಗೆ ಅಣೆಕಟ್ಟು ನಿರ್ಮಾಣವಾಗಿದ್ದು ಕಾವೇರಿ ನದಿಗೆ. ಚೋಳ ಸಾಮ್ರಾಜ್ಯದ ಕರಿಕಾಲ ಚೋಳ ಎಂಬ ಅರಸು ಪ್ರಥಮ ಬಾರಿಗೆ ಅಣೆಕಟ್ಟು ನಿರ್ಮಿಸಿದ. ಕ್ರಿ.ಶ. 1068ರಲ್ಲಿ ತಮಿಳುನಾಡಿನ ಕಲ್ಲಣೈ ಎಂಬಲ್ಲಿ ಕಾವೇರಿ ನದಿಗೆ ಅಡ್ಡವಾಗಿ ಕಟ್ಟೆ ನಿರ್ಮಿಸಿದ ಎಂದು ಇತಿಹಾಸ ಹೇಳುತ್ತದೆ. ತಲಕಾಡಿನ ಗಂಗರ ಅರಸು ಇಮ್ಮಡಿ ರಾಚಮಲ್ಲ ತಲೆನರೆ ಎಂಬಲ್ಲಿ ಈ ನದಿಗೆ ಅಣೆಕಟ್ಟೆ ನಿರ್ಮಿಸಿದ್ದು ಕನ್ನಂಬಾಡಿ ಕಟ್ಟೆಗೆ ಮೊದಲು ಮೈಸೂರು ರಾಜ್ಯದಲ್ಲೇ ಸುಮಾರು 12 ಸ್ಥಳಗಳಲ್ಲಿ ಕಾವೇರಿ ನದಿಗೆ ಅಣೆಕಟ್ಟೆಗಳನ್ನು ನಿರ್ಮಿಸಲಾಗಿತ್ತು.

ಕೃಷ್ಣರಾಜ ಸಾಗರ ಜಲಾಶಯ ಕಟ್ಟಿದ್ದರಿಂದ 13,923 ಎಕರೆ ಖುಷ್ಕಿ ಭೂಮಿ, 9,520 ಎಕರೆ ತರಿಭೂಮಿ ಹಾಗೂ 8,500 ಎಕರೆ ಸರ್ಕಾರಿ ಭೂಮಿ ಮುಳುಗಡೆಯಾಯಿತು. 25 ಗ್ರಾಮಗಳು ನೀರಿನಲ್ಲಿ ಮುಳುಗಡೆಯಾದವು. ಇದರಿಂದ 15,000 ಮಂದಿ ನಿರ್ವಸತಿಗಾರರಾದರು. ಸಂತ್ರಸ್ತರಿಗೆ ನಾಲ್ವಡಿಯವರು ಎಲ್ಲಾ ಸೌಲಭ್ಯಗಳನ್ನು ಅಂದರೆ ನಿವೇಶನ, ರಸ್ತೆ, ಬಾವಿ, ಪಾಠಶಾಲೆ, ಮಂದಿರಗಳನ್ನು ಕಟ್ಟಿಸಿಕೊಟ್ಟರು.

ಕೃಷ್ಣರಾಜ ಸಾಗರ ಜಲಾಶಯ ನಿರ್ಮಾಣದ ಅವಶ್ಯಕತೆ ಉಂಟಾದದ್ದು 1902ರಲ್ಲಿ ನಿರ್ಮಾಣವಾದ ಶಿವನಸಮುದ್ರ ಜಲವಿದ್ಯುತ್ ಉತ್ಪಾದನಾ ಕೇಂದ್ರದಿಂದ. ಏಕೆಂದರೆ, ಈ ವಿದ್ಯುತ್ ಉತ್ಪಾದನಾ ಕೇಂದ್ರವು ಕಾರ್ಯರಂಭವಾದಾಗ ಸುಮಾರು 4,300 ಕಿ.ವ್ಯಾ ವಿದ್ಯುತ್ ಉತ್ಪಾದಿಸುತ್ತಿದ್ದು ಇದನ್ನು ಕೋಲಾರದ ಚಿನ್ನದ ಗಣಿಗೆ ಸರಬರಾಜು ಮಾಡಲಾಗುತ್ತಿತ್ತು ಆದರೆ ಬೇಸಿಗೆಯಲ್ಲಿ ನೀರಿನ ಪ್ರಮಾಣ ಕಡಿಮೆಯಾಗಿ ವಿದ್ಯುತ್ ಉತ್ಪಾದನೆಗೆ ಅಡಚಣೆಯಾಗುತ್ತಿತ್ತು. ಅಲ್ಲದೆ, ಕೋಲಾರ ಚಿನ್ನದ ಗಣಿಯಲ್ಲಿ ವಿದ್ಯುತ್ ಬೇಡಿಕೆಯು ಹೆಚ್ಚಾಗಿತ್ತು. ಆದ್ದರಿಂದ ಖಾಯಂ ಪರಿಹಾರಕ್ಕೆಂದು ಕನ್ನಂಬಾಡಿ ಯೋಜನೆಯು ಸಿದ್ಧಗೊಂಡಿತ್ತು. ಬರಗಾಲ ಪೀಡಿತ ಪ್ರದೇಶಗಳಾದ ಮಂಡ್ಯ, ಮಳವಳ್ಳಿ, ಮದ್ದೂರು, ನಾಗಮಂಗಲ, ಟಿ.ನರಸೀಪುರ ಮೊದಲಾದ ಕ್ಷೇತ್ರಗಳಿಗೆ(ಸ್ಥಳಗಳಿಗೆ) ಖಾಯಂ ನೀರಾವರಿ ಸೌಲಭ್ಯವನ್ನು ಒದಗಿಸಿ ಕೃಷಿ ಕ್ಷೇತ್ರದ ಪ್ರಗತಿ

ಸಾಧಿಸುವ ಉದ್ದೇಶವನ್ನು ಹೊಂದಿ ಕನ್ನಂಬಾಡಿ ಜಲಾಶಯವನ್ನು ನಿರ್ಮಿಸಲಾಯಿತು. ಮೈಸೂರು ಸಂಸ್ಥಾನವು ಅಭಿವೃದ್ಧಿಗೊಳ್ಳಲು ಕೃಷಿ & ಕೈಗಾರಿಕೆಗಳ ಅಭಿವೃದ್ಧಿ ಅತ್ಯಗತ್ಯ, ಅದಕ್ಕಾಗಿ ಬೇಕಾದ ನೀರಾವರಿ ಮತ್ತು ವಿದ್ಯುತ್ತನ್ನು ಒದಗಿಸಲು ಕೃಷ್ಣರಾಜ ಸಾಗರವನ್ನು ನಿರ್ಮಿಸಲು ಮಹಾರಾಜರು ಆಸಕ್ತಿ ವಹಿಸಿದರು.

**ಯೋಜನೆಯ ಹಂತಗಳು**

ಕೃಷ್ಣರಾಜ ಸಾಗರ ಜಲಾಶಯ ನಿರ್ಮಾಣದ ಕನಸು ಚಿಗುರೊಡೆಯಿತು. ನಾಲ್ವಡಿಯವರು ಮುಂಬೈನಲ್ಲಿ ಇಂಜಿನಿಯರ್ ಆಗಿದ್ದ ಸರ್.ಎಂ.ವಿಶ್ವೇಶ್ವರಯ್ಯನವರನ್ನು 1909ರಲ್ಲಿ ಮೈಸೂರಿಗೆ ಕರೆಸಿಕೊಂಡರು. ವಿಶ್ವೇಶ್ವರಯ್ಯನವರ ಆಗಮನದಿಂದ ಕನ್ನಂಬಾಡಿ ಜಲಾಶಯವು ಸಕಾರಗೊಳ್ಳಲು ಮಾರ್ಗವಾಯಿತು. 1911ರಲ್ಲಿ ಯೋಜನೆಯನ್ನು ಸಿದ್ಧಪಡಿಸಿ ಪ್ರಸ್ತಾವನೆಯನ್ನು (ಸರ್ಕಾರದ) ಮುಂದಿಡಲಾಯಿತು.

ಇದರ ಪ್ರಕಾರ ಮೈಸೂರಿನಿಂದ 19 ಮೈಲಿ ಮತ್ತು ಶ್ರೀರಂಗಪಟ್ಟಣದಿಂದ 6 ಮೈಲಿ ದೂರದಲ್ಲಿರುವ ಕನ್ನಂಬಾಡಿಯಲ್ಲಿ ಜಲಾಶಯವನ್ನು ನಿರ್ಮಿಸಲು ಯೋಜಿಸಲಾಯಿತು. ಈ ಯೋಜನೆಯಿಂದ 25 ಹಳ್ಳಿಗಳು, 9250 ಎಕರೆ ನೀರಾವರಿ ಪ್ರದೇಶ, 13,293 ಎಕರೆ ಖುಷ್ಕಿ ಪ್ರದೇಶ, 8,500 ಎಕರೆ ಸರ್ಕಾರಿ ಭೂಮಿ ಮುಳುಗಡೆಯಾಯುತ್ತದೆ ಎಂದು ಅಂದಾಜಿಸಲಾಯಿತು.

ಈ ಬೃಹತ್ ಯೋಜನೆಯ ಅಂದಾಜು ವೆಚ್ಚ 2.53 ಕೋಟಿ ರೂಗಳಾಗಿದ್ದು ಅದು ರಾಜ್ಯದ ವಾರ್ಷಿಕ ಆದಾಯಕ್ಕಿಂತಲೂ ಹೆಚ್ಚಾಗಿದ್ದುದರಿಂದ ಸರ್ಕಾರದ ಉನ್ನತ ಅಧಿಕಾರಿಗಳೂ ಮತ್ತು ಹಣಕಾಸು ಅಧಿಕಾರಿಗಳು ಯೋಜನೆಯ ಜಾರಿಗೆ ಆಕ್ಷೇಪವೆತ್ತಿದರು ಇದರಿಂದ ಈ ಯೋಜನೆಯ ಬಗ್ಗೆ ಆಗಿನ ದಿವಾನರಾಗಿದ್ದ ಟಿ. ಆನಂದ್‌ರಾವ್ ನಿರ್ಲಕ್ಷಿತರಾದರು.

ಇದರಿಂದ ನೊಂದ ವಿಶ್ವೇಶ್ವರಯ್ಯನವರು ದೈನಂದಿನ ಕೆಲಸಗಳಲ್ಲಿಯೂ ಆಸಕ್ತಿ ಕಳೆದುಕೊಂಡರು. ನಾಲ್ವಡಿಯವರು ವಿಶ್ವೇಶ್ವರಯ್ಯನವರನ್ನು ಕರೆಸಿಕೊಂಡು ಸಮಾಲೋಚನೆ ನಡೆಸಿ ಯೋಜನೆ ಜಾರಿಗೆ ನಿರ್ಧರಿಸಿದರು. ತಮ್ಮ ಬಳಿ ಇದ್ದ ನಾಲ್ಕು ಮೂಟೆ ಚಿನ್ನದ ಆಭರಣ, ಬೆಳ್ಳಿ ನಾಣ್ಯಗಳನ್ನು ಬಾಂಬೆಯಲ್ಲಿ ಮಾರಾಟ ಮಾಡಿ 80 ಲಕ್ಷ ರೂಪಾಯಿ ಒದಗಿಸುವುದರೊಂದಿಗೆ 1911ರ ಅಕ್ಟೋಬರ್ 12 ರಂದು ಯೋಜನೆಗೆ ಒಪ್ಪಿಗೆ ಸೂಚಿಸಿದರು.

ಈ ಯೋಜನೆಯ ಕಾರ್ಯದಲ್ಲಿ ಮಹಾರಾಜರು ಒಬ್ಬರೇ ಆಗಿದ್ದರೂ ಅದರಲ್ಲಿ ತೊಡಗಿಸಿಕೊಂಡ ದಿವಾನರುಗಳಲ್ಲಿ ಸರ್.ಎಂ.ವಿಶ್ವೇಶ್ವರಯ್ಯನರವನಂತರ ದಿವಾನ್ ಕಾಂತರಾಜ ಅರಸ್, ಎ.ಬ್ಯಾನರ್ಜಿ, ಸರ್ ಮಿರ್ಜಾ ಇಸ್ಮಾಯಿಲ್ ಹಾಗೂ ಇಂಜಿನಿಯರ್ & ಅಧಿಕಾರಿಗಳಾದ ಬಸವಾಪಟ್ಟಣ ಸುಬ್ಬರಾವ್, ಕರ್ಪೂರ ಶ್ರೀನಿವಾಸರಾವ್, ಸಿ ಕಡಾಂಬಿ, ಎಸ್.ಶ್ರೀನಿವಾಸ ಅಯ್ಯರ್ ಮೊದಲಾದವರು ಶ್ರಮಿಸಿದ್ದಾರೆ. ಇದರಲ್ಲಿ ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರು & ಮುಖ್ಯ ಇಂಜಿನಿಯರ್ ಸರ್ ಎಂ.ವಿಶ್ವೇಶ್ವರಯ್ಯನವರು ಪ್ರಮುಖರು.

ಅಣೆಕಟ್ಟು ನಿರ್ಮಾಣ ಯೋಜನೆಯನ್ನು ಮೂರು ಹಂತಗಳಲ್ಲಿ ಅನುಷ್ಠಾಗೊಳಿಸಲು ನಿರ್ಧರಿಸಲಾಯಿತು. ಮೊದಲು ಹಂತದಲ್ಲಿ ಅಣೆಕಟ್ಟೆ ನಿರ್ಮಾಣ, ಎರಡನೇ ಹಂತದಲ್ಲಿ ಕಾಲುವೆ ನಿರ್ಮಾಣ, ಮೂರನೇ ಹಂತದಲ್ಲಿ ಜಲವಿದ್ಯುತ್ ಘಟಕಸ್ಥಾಪನೆ ಮಾಡಲು ಯೋಜನೆ ರೂಪಿಸಲಾಯಿತು.

10,000 ಕಾರ್ಮಿಕರು ನಿರಂತರ ದುಡಿದ ಕಾರಣ 1915ರಲ್ಲಿ 65 ಅಡಿ, 1919ರಲ್ಲಿ 107 ಅಡಿ ನಿರ್ಮಾಣವಾಯಿತು. ಅಲ್ಲಿಯವರೆಗೆ ಸುಮಾರು 155 ಲಕ್ಷ ರೂಪಾಯಿ ವೆಚ್ಚವಾಗಿತ್ತು. 1921ರಲ್ಲಿ ಮೊದಲನೆ ಹಂತದ ಯೋಜನೆ ಮುಗಿದು ಅದಕ್ಕೆ ತಗುಲಿದ ವೆಚ್ಚ 211 ಲಕ್ಷ ರೂಪಾಯಿಗಳಾಗಿತ್ತು. 1924ರಲ್ಲಿ ಜಲಾಶಯದ ಜೊತೆಗೆ ಕಾಲುವೆಗಳ ನಿರ್ಮಾಣ ಕಾರ್ಯ ಆರಂಭವಾಯಿತು. ಈ ಜಲಾಶಯದ ನಿರ್ಮಾಣ 1911ರಲ್ಲಿ ಆರಂಭವಾಗಿ 1939ರಲ್ಲಿ ಮುಕ್ತಾಯವಾಯಿತು. ಇದರ ಒಟ್ಟು ಖರ್ಚು 3 ಕೋಟಿ 23 ಲಕ್ಷ 47 ಸಾವಿರ(3,23,47,000)ಗಳಾಗಿದೆ.

ಜಲಾಶಯದ ಬೇರೆ ಬೇರೆ ಮಟ್ಟದಲ್ಲಿ ವಿವಿಧ ಅಳತೆಯ ಒಟ್ಟು 171 ತೂಬುಗಳನ್ನು ಅಳವಡಿಸಲಾಗಿದೆ. ಪ್ರವಾಹದ ನೀರು ಹೊರ ಹರಿಯಲು, ಕೆಸರು ಕೊಚ್ಚಿ ಹೋಗುವಂತೆ ಮಾಡಲು ಹಾಗೂ ವಿದ್ಯುತ್ ಉತ್ಪಾದನಾ ಘಟಕಕ್ಕೆ ನೀರು ಹರಿಸಲು ಪ್ರತ್ಯೇಕ ತೂಬುಗಳನ್ನು ಅಳವಡಿಸಲಾಗಿದೆ. ದಕ್ಷಿಣ ದ್ವಾರದ ಆಚೆಗೆ 8 ಅಡಿ ಅಗಲ ಮತ್ತು 12 ಅಡಿ ಎತ್ತರ ಇರುವ 40 ತೂಬುಗಳಿವೆ. ನೆಲಮಟ್ಟದಿಂದ 106 ಅಡಿ ಎತ್ತರದಲ್ಲಿ ಈ ತೂಬುಗಳನ್ನು ಅಳವಡಿಸಲಾಗಿದೆ.

ಈ ತೂಬುಗಳ ಆಚೆಗೆ 10 ಅಡಿ ಅಗಲ ಮತ್ತು 8 ಅಡಿ ಎತ್ತರರದ 48 ತೂಬುಗಳಿದ್ದು, ನದಿ ಪಾತ್ರದ 103 ಅಡಿಗಳ ಮಟ್ಟದಲ್ಲಿ ಇವುಗಳನ್ನು ಇಡಲಾಗಿದೆ. ಈ ತೂಬು ಬಾಗಿಲುಗಳ ಮೇಲೆ 10 ಅಡಿ ಅಗಲ ಮತ್ತು 10 ಅಡಿ ಎತ್ತರದ 48 ತೂಬುಗುಂಡಿಗಳಿವೆ. ನೆಲಮಟ್ಟದಿಂದ 114 ಅಡಿಗಳ ಎತ್ತರದಲ್ಲಿರುವ ಈ ತೂಬುಗುಂಡಿಗಳಿಗೆ ಸ್ವಯಂ ಚಾಲಿತ ಬಾಗಿಲುಗಳನ್ನು ಜೋಡಿಸಲಾಗಿದೆ. ಈ ತಂತ್ರಜ್ಞಾನಕ್ಕೆ ಸರ್.ಎಂ.ವಿಶ್ವೇಶ್ವರಯ್ಯ ಅವರು ಹಕ್ಕುಸ್ವಾಮ್ಯ ಪಡೆದಿದ್ದರು. ಜಲಾಶಯದ ಮಟ್ಟ 124 ಅಡಿಗೆ ಮುಟ್ಟುತ್ತಿದ್ದಂತೆ ಇವು ತಾನಾಗಿಯೇ ತೆರೆದುಕೊಳ್ಳುತ್ತವೆ.

ಈ ತೂಬುಗಳ ಜೊತೆಗೆ 80 ಅಡಿ ಎತ್ತರದಲ್ಲಿ 10 ಅಡಿ ಅಗಲ ಮತ್ತು 20 ಅಡಿ ಎತ್ತರವಿರುವ 16 ತೂಬುಗಳಿವೆ. ಇವುಗಳಲ್ಲದೆ ಅಣೆಕಟ್ಟೆಯ ಮಧ್ಯಭಾಗದಲ್ಲಿ 6 ಅಡಿ ಅಗಲ ಮತ್ತು 15 ಅಡಿ ಎತ್ತರದ 11 ತೂಬುಗಳಿದ್ದು, ಕ್ರ್ಯಾಚ್‌ವಿಂಚ್ ಸಾಧನ ಬಳಸಿ ಮೇಲಕ್ಕೇರಿಸುವ ಮತ್ತು ಕೆಳಕ್ಕಿಳಿಸುವ ಮೂಲಕ ಜಲಾಶಯದ ಕಸರನ್ನು ಹೊರಹಾಕಬಹುದು.

ಜಲಾಶಯದ ಈ ಎಲ್ಲ ತೂಬುಗಳನ್ನು ಒಮ್ಮಲೇ ತೆರೆದರೆ 3.50 ಲಕ್ಷ ಕ್ಯೂಸೆಕ್ಸ್ (ಒಂದು ಸೆಕೆಂಡ್‌ಗೆ ಒಂದು ಘನ ಅಡಿ ನೀರು ಹರಿದರೆ ಅದು ಒಂದು ಕ್ಯೂಸೆಕ್ ಆಗುತ್ತದೆ) ಹೊರಹರಿಯುತ್ತದೆ. 80 ಅಡಿ ಮಟ್ಟದ 31 ತೂಬುಗಳ ಬಾಗಿಲುಗಳು ಇಂಗ್ಲೆಂಡ್‌ನ ರಾನ್‌ಸಮ್ಸ್ ಕಂಪನಿಯಿಂದಲೂ, ಉಳಿದ ತೂಬುಗಳ ಬಾಗಿಲುಗಳು ಭದ್ರಾವತಿಯ ಕಬ್ಬಣದ ಕಾರ್ಖಾನೆಯಲ್ಲಿ ಬೀಡು ಕಬ್ಬಿಣದಿಂದಲೂ ತಯಾರಿಸಲಾಗಿದೆ.

**ಗ್ರಂಥಋಣ:**


1. ಇತಿಹಾಸ & ಪುರಾತತ್ವ – ಮೈಸೂರು ವಿಶ್ವವಿದ್ಯಾನಿಲಯ ಪ್ರಸಾರಂಗದ ಪ್ರಕಟಣೆ.
2. ಅನಿತಾ, ಎಂ.ಎಸ್ – ರಾಜರ್ಷಿ ನಾಲ್ವಡಿ ಕಋಷ್ಣರಾಜ ಒಡೆಯರ್
3. ಬಸವರಾಜು. ಎಂ.ಜಿ –ಮಹಾಯಂತ್ರರ್ಷಿ ಸರ್ ಎಂ. ವಿಶ್ವೇಶ್ವರಯ್ಯ
4. ಮಹೇಶ್. ಎನ್. – ರಾಜರ್ಷಿ ನಾಲ್ವಡಿ ಕೃಷ್ಣರಾಹ ಒಡೆಯರ್
5. ಲೋಕಪ್ಪಗೌಡ. ಸಿ.ಎಸ್– ಆಧುನಿಕ ಕರ್ನಾಟಕ.